ಪ್ರಥಮ ಬಿ.ಕಾಂ 2ನೇ ಸೆಮಿಸ್ಟರ್
ಮಲ್ಲಿಕಾ ಜಿ.ಎಸ್ ನಂಬ್ಯ



# ೪. ತಾಯಿ

**- ಡಾ. ಯು.ಆರ್.ಅನಂತಮೂರ್ತಿ**

**ಕಥೆ-ಕಥೆಗಾರರ ಪರಿಚಯ : ಯು.ಆರ್. ಅನಂತಮೂರ್ತಿ**

ಶಿವಮೊಗ್ಗ ಜಿಲ್ಲೆಯ ಮೇಳಿಗೆ ಗ್ರಾಮದಲ್ಲಿ ಜನನ. ಕಥಾ ಸಂಕಲನಗಳು ಎಂದೆಂದೂ ಮುಗಿಯದ ಕಥೆ, ಪ್ರಶ್ನೆ, ಮೌನಿ, ಆಕಾಶ ಮತ್ತು ಬೆಕ್ಕು. ಬಾವಲಿ, ಹದಿನೈದು ಪದ್ಯಗಳು, ಕನ್ನಡ ಕಾವ್ಯ ಸಂಗ್ರಹ (ಸಂಪಾದಿತಕೃತಿ) ಕವನ ಸಂಕಲನಗಳು. ಆವಾಹನೆ ನಾಟಕ, ಸಂಸ್ಕಾರ, ಭಾರತೀಪುರ, ಅವಸ್ಥೆ - ಕಾದಂಬರಿಗಳು. ಪ್ರಜ್ಞೆ ಮತ್ತು ಪರಿಸರ - ವಿಮರ್ಶಾ ಲೇಖನ. 'ರುಜುವಾತು' ಸಾಂಸ್ಕೃತಿಕ ಸಾಹಿತ್ಯಿಕ ತ್ರೈಮಾಸಿಕ ಪತ್ರಿಕೆಗೆ ಸಂಪಾದಕರಾಗಿದ್ದರು. ಅಂತರಾಷ್ಟ್ರೀಯ ಖ್ಯಾತಿ ಗಳಿಸಿರುವ 'ಸಂಸ್ಕಾರ' ಹಲವು ಭಾಷೆಗಳಿಗೆ ಅನುವಾದವಾಗಿದೆ. ಇಂಗ್ಲೆಂಡ್‌ನ ಬರ್ನಿಂಗ್‌ಹ್ಯಾಮ್ ವಿಶ್ವವಿದ್ಯಾನಿಲಯದಲ್ಲಿ ಡಾಕ್ಟರೇಟ್ ಪಡೆದವರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರಾಗಿದ್ದ ಇವರು ಕೇರಳದ ಮಹಾತ್ಮಗಾಂಧಿ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದರು. ಜ್ಞಾನಪೀಠ ಪ್ರಶಸ್ತಿ ವಿಜೇತರು.

ಪ್ರಸ್ತುತ ಕತೆ 'ತಾಯಿ'ಯಲ್ಲಿ ತಾಯಿಯು ತನ್ನ ಕಥೆಯನ್ನು ತನ್ನ ಮಗ ಶೀನನಿಗೆ ಹೇಳುತ್ತ ತನ್ನ ಕ್ರೂರ ವಾಕ್ಯಕ್ಕೆ ರೇಗಿ ಮನೆ ಬಿಟ್ಟು ಹೋದ ದೊಡ್ಡ ಮಗನನ್ನು ನೆನೆಯುತ್ತ ತನ್ನ ಕ್ರೌರ್ಯದ ಭೂತಾಕಾರವನ್ನು ಕಂಡು ನಡುಗುವ ತಾಯಿ ಅಬ್ಬಕ್ಕನ ಚಿತ್ರಮನಕರಗುವಂತೆ ಚಿತ್ರಿತವಾಗಿದೆ. ಇಲ್ಲಿ ಕಥೆಗಾರ ತಾನು ಹೊರಗೆನಿಂತು ಪಾತ್ರಗಳ ಮೂಲಕವೆ ಭಾವಗಳ ಸೂಕ್ಷ್ಮತೆಯನ್ನು ವ್ಯಕ್ತಪಡಿಸುವುದು ಅತ್ಯುತ್ತಮ ಕಲೆಗಾರಿಕೆಯ ಲಕ್ಷಣ. ವಸ್ತುನಿಷ್ಠತೆ ಮತ್ತುಮನಸ್ಸಿನ ಸೂಕ್ಷ್ಮತೆಯ ಚಿತ್ರಣ - ಈ ಎರಡರ ಸಮನ್ವಯ ಆಧುನಿಕ ಸಾಹಿತ್ಯದ ವಿಶಿಷ್ಟ ಗುಣವಾಗಿದೆ. ಸೂಚ್ಯವಾಗಿ, ಸಮರ್ಥವಾಗಿ, ಸಂಗ್ರಹವಾಗಿ ಮಾತೃ ಹೃದಯದ ಸಮಗ್ರಚಿತ್ರ ಚೆನ್ನಾಗಿ ಮೂಡಿಬಂದಿದೆ.

ತಾಯಿ ಅಬ್ಬಕ್ಕ ಮಗ ಶೀನುವಿಗೆ ಸಮಾಧಾನ ಮಾಡಿ ಮಲಗಿಸಲು ಪ್ರಯತ್ನಿಸುತ್ತಿದ್ದಾಳೆ. ಅದು ಏನು ಮಾಡಿದರೂ ನಿದ್ದೆ ಮಾಡುತ್ತಿಲ್ಲ. ಅಬ್ಬಕ್ಕನ ಕಣ್ಣಿನಿಂದ ನೀರು ಸುರಿಯುತ್ತಲೇ ಇದೆ. ಮತ್ತೆ ಮತ್ತೆ ಮನೆಬಿಟ್ಟು ಹೋದ ಮಗನನ್ನು ನೆನಪಿಸಿಕೊಳ್ಳುತ್ತ ಅಳುತ್ತಿದ್ದಾಳೆ. ಶೀನುವಿಗೆ ತಾಯಿಯ ಅಳುವಿಗೆ ಕಾರಣ ಗೊತ್ತಾಗದೆ ಇದ್ದುದರಿಂದ ಅದಕ್ಕೆ ಕಾರಣವೇನೆಂದು ತಾಯಿಯನ್ನು ಕೇಳುತ್ತಿದ್ದಾನೆ. ತಾಯಿ ಮಗನ ಪ್ರಶ್ನೆಗೆ ಹೇಗೆ ಉತ್ತರ ಹೇಳಬೇಕೆಂದು ತಿಳಿಯದೆ ಯೋಚನೆಗೀಡಾಗಿದ್ದಾಳೆ. ಆದರೆ ಏನಾದರಾಗಲಿ ತನ್ನ ನೋವಿನ ಕಾರಣವನ್ನು ಹೇಳಬೇಕೆಂದು ತೀರ್ಮಾನಿಸಿದಳು.



CS Scanned with CamScanner

ಮಗನೆ ನಿನಗೊಬ್ಬ ಚೆಲುವ ಎಂಬ ಅಣ್ಣನಿದ್ದನು. ಅವನು ಎಲ್ಲಿದ್ದಾನೆ, ಹೇಗಿದ್ದಾನೆ ಅಥವಾ ಹುಲಿಯೇನಾದರೂ ತಿಂದುಹಾಕಿತೊ ಎಂದು ತಿಳಿಯದೆ ನನಗೆ ಸಂಕಟವಾಗಿದೆ ಎಂದು ಅವನ ಸುಂದರ ರೂಪವನ್ನು ನೆನಪಿಸಿಕೊಳ್ಳುತ್ತಾಳೆ. ನನ್ನ ಮೇಲೆ ಕೋಪಿಸಿಕೊಂಡು ಚಲುವನು ಮನೆ ಬಿಟ್ಟು ಹೊರಟುಹೋದನು ಎಂದು ಮಗನಿಗೆ ಹೇಳಿದಳು. ನೀನು ಏಕೆ ಅವನನ್ನು ತಡೆಯಲಿಲ್ಲ ಎಂಬ ಮಗನ ಪ್ರಶ್ನೆಗೆ ಉತ್ತರಿಸಲಾಗದೆ ತಡವರಿಸುತ್ತಾಳೆ. ಅಪ್ಪಯ್ಯನಾದರೂ ಅಣ್ಣನನ್ನು ಏಕೆ ತಡೆಯಲಿಲ್ಲ ಎಂದಾಗ ಇನ್ನು ನಡೆದ ಘಟನೆಯನ್ನು ವಿವರಿಸದೆ ವಿಧಿ ಇಲ್ಲ ಎಂದು ತಿಳಿದುಕೊಂಡು ಹೇಳಲು ಶುರು ಮಾಡುತ್ತಾಳೆ.

ನಿನ್ನ ತಂದೆ ಅವನ ತಂದೆ ಇಬ್ಬರೂ ಬೇರೆ ಬೇರೆಯೇ ಇದ್ದರು. ಹದಿಮೂರು ವರ್ಷ ಕೂಲಿನಾಲಿ ಮಾಡಿ ಅವನನ್ನು ಒಬ್ಬಂಟಿಯಾಗಿ ಸಾಕಿದೆನು. ಆಮೇಲೆ ಒಂಟಿಯಾಗಿ ಬಾಳಲಾರದೆ ಹೊಸ ಮೋಹಕ್ಕೆ ಸಿಲುಕಿ, ಬೇರೆಯವರಂತೆ ನಾನೂ ಸಹ ಅವನೊಡನೆ ಕೂಡಿಕೆ ಮಾಡಿಕೊಂಡೆನು. ಹದಿಮೂರು ವರ್ಷದವನಾದ ಚೆಲುವನಿಗೂ ನನಗೂ ವೈಮನಸ್ಸುಂಟಾಗಿ ಅವನು ಮನೆಬಿಟ್ಟು ಹೊರಟುಹೋದನು. ಅವನು ಹೋಗಿ ಎಂಟತ್ತು ವರ್ಷಗಳಾದರೂ ಒಮ್ಮೆಯೂ ತಿರುಗಿ ನನ್ನ ಕಡೆ ನೋಡಿಲ್ಲ. ಪ್ರಾಯ ಬಂತೆಂದು ಹೆತ್ತವಳನ್ನು ತೊರೆದುಹೋದನು. ನನ್ನ ಕಡೆಯಿಂದಲೂ ಸಹ ತಪ್ಪಾಗಿಹೋಯಿತು. ನಾನು ಕೂಡ ತುಂಬು ಯೌವ್ವನದಲ್ಲಿದ್ದಾಗ ಅವನ ಮೋಹಕ್ಕೊಳಗಾಗಿ ಮಗನ ಮೇಲಿನ ಮೋಹದಿಂದ ದೂರಾಗುವಂತಾಯಿತು. ಎಂದೂ ದುಡುಕದವಳು ಅಂದು ದುಡುಕಿದ್ದರಿಂದ ಮಗನಾದ ಚೆಲುವ ನನ್ನ ಕೈಬಿಟ್ಟು ಹೋದನು.

ಇಂದು ಅವನ ಹುಟ್ಟುಹಬ್ಬ, ಈಗ ಅವನು ಇದ್ದಿದ್ದರೆ ಅವನಿಗೆ ಇಪ್ಪತ್ತೆರಡು ವರ್ಷವಾಗಿರುತ್ತಿತ್ತು. ಸೊಸೆಯನ್ನು ಮನೆಗೆ ತಂದು ಮೊಮ್ಮಗನನ್ನು ಆಡಿಸುವ ಪುಣ್ಯ ನನಗೆಲ್ಲಿ ? ನಾನು ತಾಯಿಯೇ ಅಲ್ಲ, ರಾಕ್ಷಸಿ, ಕಡುಪಾಪಿ ಎಂದು ತನ್ನನ್ನು ತಾನು ಶಪಿಸಿಕೊಂಡಳು. ಅವನು ವಾಪಸ್ ಬಂದು ಬಿಟ್ಟರೆ ಸಾಕು, ತಾನು ತನ್ನ ಗಂಡನನ್ನು ತೊರೆದಾದರೂ ಸರಿ ನನ್ನ ಮಗನ ಜೊತೆ ಸಂತೋಷದಿಂದ ಜೀವನ ಮಾಡುತ್ತೇನೆ. ಕೊನೆಗೆ ಅವಳ ಮನಸ್ಸು ಎಷ್ಟು ವೇದನೆಯನ್ನನುಭವಿಸುತ್ತಿತ್ತು ಎಂದರೆ ಮಗನೆ ಬಂದುಬಿಟ್ಟನೇನೋ ಎಂಬಂತೆ ಭ್ರಮೆಗೊಳಗಾದಳು. ಮತ್ತೆ ಕಾಣಿಸಿಕೊಂಡು ದೂರ ದೂರ ಸಾಗುತ್ತಾ ಹೋದಂತಾಗಿ ಇನ್ನಷ್ಟು ಹಂಬಲಿಸತೊಡಗಿದಳು.

ಹೀಗೆ ತಾಯೊಬ್ಬಳು ತನ್ನದೊಂದು ತಪ್ಪಿನಿಂದ ಮಗನನ್ನು ಕಳೆದುಕೊಂಡು ಎಂತಹ ತಪ್ಪು ಮಾಡಿದೆನೆಂಬ ಪಶ್ಚಾತ್ತಾಪದಿಂದ ವೇದನೆಗೊಳಗಾಗುವ ಸಂದರ್ಭವನ್ನು



Scanned with CamScanner

ಈ ಕಥೆಯಲ್ಲಿ ಕಾಣಬಹುದಾಗಿದೆ,

**ಕೆಳಗಿನ ಪ್ರಶ್ನೆಗೆ ವಿವರವಾಗಿ ಉತ್ತರಿಸಿ :-**

೧) ಮಾತೃ ಹೃದಯದ ಅಬ್ಬಕ್ಕನು ಪಡುವ ವೇದನೆಯನ್ನು 'ತಾಯಿ' ಕಥೆಯ ಮೂಲಕ ವಿವರಿಸಿ.

(೨) ತಾಯಿ ಕಥೆಯ ಸಾರಾಂಶವನ್ನು ಎರಡೂವರೆ ಪುಟದಲ್ಲಿ ವಿವರಿಸಿ.

**ಈ ಕೆಳಗಿನ ಸಂದರ್ಭಗಳ ಸ್ವಾರಸ್ಯ ಬರೆಯಿರಿ :-**

೧) ಅದಕ್ಕೆ ಅಲ್ಲವೆ ಎಂದೂ ದುಡುಕದವಳು ಅಂದು ದುಡುಕಿದ್ದು.

ಈ ಸಾಲನ್ನು ಯು.ಆರ್.ಅನಂತಮೂರ್ತಿಯವರ 'ತಾಯಿ' ಕಥೆಯಿಂದ ಆರಿಸಿಕೊಳ್ಳಲಾಗಿದೆ. ತಾಯಿ ಅಬ್ಬಕ್ಕ ಈ ಮಾತನ್ನು ತನ್ನಲ್ಲಿಯೇ ಹೇಳಿಕೊಳ್ಳುತ್ತಾಳೆ. ಮಗನಾದ ಚೆಲುವನು ಮನೆಬಿಟ್ಟು ಹೋದ ಸಂದರ್ಭಕ್ಕೆ ಕಾರಣಗಳನ್ನು ಊಹೆ ಮಾಡಿಕೊಳ್ಳುತ್ತಿದ್ದಾಳೆ. ನಾನು ನನ್ನ ಒಂದು ತಪ್ಪಿನಿಂದ ಮೋಹಕ್ಕೊಳಗಾದೆ. ಅದನ್ನು ವಿರೋಧಿಸಿದ ಮಗನನ್ನು ಗದರಿಸಿದೆ. ಇವೆಲ್ಲ ಹೇಗಾಯಿತು. ಇದಕ್ಕೆ ಕಾರಣ ತಾನು ಕೂಡಿಕೆ ಮಾಡಿಕೊಂಡವನ ಮೇಲಿನ ಮೋಹದಿಂದ ಅಂದು ದುಡುಕಿಬಿಟ್ಟೆ, ಇದರಿಂದಾಗಿ ಇಂದು ಈ ಸ್ಥಿತಿ ಅನುಭವಿಸುವಂತಾಗಿದೆ ಎಂದು ತಾಯಿಯು ಅಂದುಕೊಂಡಳು.

೨) ತಾನು ತಾಯಿಯೆ ? ಅಲ್ಲ ರಾಕ್ಷಸಿ. ಪಿಶಾಚಿ. ಕಡುಪಾಪಿ.

ಈ ಸಾಲನ್ನು ಯು.ಆರ್.ಅನಂತಮೂರ್ತಿಯವರ 'ತಾಯಿ' ಕಥೆಯಿಂದ ಆರಿಸಿಕೊಳ್ಳಲಾಗಿದೆ. ತಾಯಿ ಅಬ್ಬಕ್ಕ ಈ ಮಾತನ್ನು ತನ್ನಲ್ಲಿಯೇ ಹೇಳಿಕೊಳ್ಳುತ್ತಾಳೆ. ತನ್ನದೊಂದು ಮೋಹದಿಂದಾಗಿ ಅಂದು ದುಡುಕಿ ಅವನನ್ನು ಗದರಿಬಿಟ್ಟೆನು. ಅವನು ಮನೆಬಿಟ್ಟು ಹೋದವನು ವಾಪಸ್ ಬರಲೇ ಇಲ್ಲ. ಅವನ ಈ ಸ್ಥಿತಿಗೆ ನಾನೇ ಕಾರಣ. ನಾನು ಅಂದು ಅವನನ್ನು ಗದರದೇ ಹೋಗಿದ್ದರೆ ಅವನು ನನ್ನನ್ನು ಬಿಟ್ಟು ಹೋಗುತ್ತಿರಲಿಲ್ಲ. ಅವನು ಈಗ ನನ್ನೊಡನೆ ಇದ್ದಿದ್ದರೆ ಅವನಿಗೆ ೨೨ ವರ್ಷವಾಗಿರುತ್ತಿತ್ತು. ಸೊಸೆಯನ್ನು ಅವನಿಗೆ ತಂದು ಮೊಮ್ಮಗನನ್ನು ಆಡಿಸಬಹುದಿತ್ತು. ಇದೆಲ್ಲವನ್ನು ಹಾಳುಮಾಡಿದ ನಾನು ತಾಯಿಯೇ ಅಲ್ಲ ರಾಕ್ಷಸಿ ಎಂದು ತನ್ನನ್ನು ತಾನೆ ನಿಂದಿಸಿಕೊಂಡು ಸಂಕಟಪಡುತ್ತಾಳೆ.

I B com II Semister



# ೮. ಕಪ್ಪು ಕಲ್ಲಿನ ಸೈತಾನ್

– ಬೋಳುವಾರು ಮಹಮದ್ ಕುಂಞ

**ಕಥೆ-ಕಥೆಗಾರರ ಪರಿಚಯ : ಬೋಳುವಾರು ಮಹಮ್ಮದ್ ಕುಂಞ (೧೯೫೧)**

ಇವರ ನಾಲ್ಕು ಕಥಾಸಂಕಲನಗಳು ಪ್ರಕಟಗೊಂಡಿವೆ. ಒಂದು ಕಾದಂಬರಿ ಪ್ರಕಟವಾಗಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಭಾರತೀಯ ಭಾಷಾ ಸಂಸ್ಥಾನದ ಪುರಸ್ಕಾರ ಲಭಿಸಿದೆ.

ಇವರು ಪ್ರಮುಖವಾಗಿ ಕಥಾಸಾಹಿತಿ, ದಲಿತ-ಬಂಡಾಯ ಸಂವೇದನೆಗಳಂತೆ ನಮ್ಮಲ್ಲಿ ಮುಸ್ಲಿಂ ಸಂವೇದನೆ ಕೂಡ ಹೆಚ್ಚು ಬೆಳೆಯುತ್ತಿದೆ. ಮುಸ್ಲಿಂ ಸಮಾಜದ ನೋವು-ನಲಿವು ಅಂಧಶ್ರದ್ಧೆ, ಬಡತನ, ಹತಾಶೆಗಳ ಬಗ್ಗೆ ತಮ್ಮ ಕೃತಿಗಳಲ್ಲಿ ಎಚ್ಚರಿಕೆ ನೀಡಿದ್ದಾರೆ. ಅಕ್ಷರ ಜಗತ್ತಿಗೆ ತೆರೆದುಕೊಂಡ ಈ ಜನಾಂಗ ತನ್ನೊಳಗಿನ ಸಂವೇದನೆಯನ್ನು ಸಶಕ್ತವಾಗಿ ಅಭಿವ್ಯಕ್ತಿಸಿದೆ. ಕುಂಞ ಅವರು ತಮ್ಮ ಕಥಾಲೋಕದಲ್ಲಿ ಇಸ್ಲಾಂನ್ನು ಒಪ್ಪಿಕೊಂಡು ಬದುಕುವ ಜನರ ಬದುಕು ಬವಣೆಗಳನ್ನು ಚಿತ್ರಿಸುತ್ತಲೆ, ಅಂತಿಮವಾಗಿ ಮನುಷ್ಯ ಮುಖ್ಯವೆ ಹೊರತು ಆತ ಅನುಸರಿಸುತ್ತಿರುವ ಧರ್ಮವಲ್ಲ ಎಂಬ ತತ್ವವನ್ನು ಅನಾವರಣ ಮಾಡುತ್ತಾರೆ. ಎಲ್ಲೆಲ್ಲಿ ಮನುಷ್ಯ ಕಾಯುತ್ತಾನೆಂದುಕೊಂಡಿದ್ದರೊ, ಅಲ್ಲೆಲ್ಲ ಮನುಷ್ಯ ಮನುಷ್ಯನನ್ನು ಕಾಯುವ ಮಾನವೀಯ ನೆಲೆಗಳನ್ನು ಪ್ರಧಾನವಾಗಿ ಲೇಖಕರು ಶೋಧಿಸಿದ್ದಾರೆ. ಪ್ರಕಟಿತ ಕೃತಿಗಳು 'ದೇವರುಗಳ ರಾಜ್ಯದಲ್ಲಿ' 'ಅಂತ' 'ಆಕಾಶಕ್ಕೆ ನೀಲಿ ಪರದೆ' – ಕಥಾ ಸಂಕಲನಗಳು 'ಜಿಹಾದ್' – ಕಾದಂಬರಿ 'ತಟ್ಟು ಚಪ್ಪಾಳೆ ಪುಟ್ಟ ಮಗು' (ಸಂಪಾದನೆ) ಇವರಿಗೆ ೧೯೯೭ ರ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ ದೊರೆತಿದೆ.

ಕುಂಞ ಪಾತುಮ್ಮಳ ಕುಟುಂಬ ತುಂಬ ಬಡತನದಿಂದ ಕೂಡಿದ್ದು ಅವಳ ಗುಡಿಸಲು ಸುಲಭದಲ್ಲಿ ಕಾಣದಷ್ಟು ಚಿಕ್ಕದಾಗಿದ್ದು ಅದೇ ನೇರದ ಗುಡ್ಡದಲ್ಲಿದ್ದ ಬಂಡೆಯನ್ನು ಕೋಡುಗಲ್ಲ ನೆತ್ತಿಯಿಂದ ತಳ್ಳಿದರೆ ಪಾತುಮ್ಮಳ ಗುಡಿಸಲನ್ನು ಅಪ್ಪಚ್ಚಿ ಮಾಡುವಂತಿತ್ತು. ಆ ಊರಿನ ಬಡವರ ಮನೆಗಳ ಹೆಸರನ್ನು ಬರೆದುಕೊಂಡು ಹೋಗಿ ೨೦ಕೆ.ಜಿ. ಅಕ್ಕಿ ಕೊಡಿಸುವ ಲೆಕ್ಕಾಚಾರ ಇತ್ತು. ಈ ಕರುಣಾಳುಗಳು ಬರುತ್ತಾರೆಂದು ಕುಂಞ ಪಾತುಮ್ಮ ಸಂತೋಷದಿಂದ ಕಾಯುತ್ತಿದ್ದಳು.

ಪಾತುಮ್ಮನ ಕುಟುಂಬ ದೊಡ್ಡದಾಗಿದ್ದು ಮೊಮ್ಮಗನಾದ ಅದ್ರಾಮ ಎಂಬುವವನಿದ್ದನು. ಆಕೆಯ ಹಿರಿಯ ಮಗಳಾದ ಸಾರಮ್ಮ, ಮಗ ಖಾದರ್, ಅವನ ಹೆಂಡತಿ ಸಕೀನ, ಮದುವೆಯ ವಯಸ್ಸಿಗೆ ಬಂದ ಮಗಳು ಹಲೀಮ



CS Scanned with CamScanner

ಇವರೆಲ್ಲರೂ ಆ ಕುಟುಂಬವರಾಗಿದ್ದು ಮನೆಗೆ ಯಜಮಾನನಾಗಬೇಕಿದ್ದ ಖಾದರ್ ದೇಶಾಂತರ ಹೊರಟುಹೋಗಿದ್ದನು.

ಅಜ್ಜಿಗೆ ಅವನು ಹೇಳಿದ ಅಕ್ಕಿಯನ್ನು ಕೊಡುತ್ತಾರೆಂಬ ಸುದ್ದಿಯನ್ನು ನಂಬಲು ಆಗುತ್ತಿಲ್ಲ. ಆದರೂ ಅಕ್ಕಿ ಸಿಗಬಹುದೆಂಬ ಒಂದು ದೂರದ ಆಸೆ ಇಟ್ಟುಕೊಂಡಿದ್ದಾಳೆ. ಅದ್ರಾಮನ ಅಮ್ಮ ಸಾರಮ್ಮ ಅಕ್ಕಿ ಕೊಡಿಸುವುದು ನಿಜವೆಂದು ಹೇಳುತ್ತಾಳೆ. ನಾವು ಓಟು ಹಾಕುತ್ತಿದ್ದ ಇಂದ್ರಾಗಾಂಧಿಯು ಸತ್ತು ೧೦ ವರ್ಷವಾಗಿರುವುದರಿಂದ ಅವಳ ಮಗ ತಾಯಿಯ ಹೆಸರಲ್ಲಿ ಅಕ್ಕಿ ಕೊಟ್ಟರೂ ಕೊಡಬಹುದೆಂದು ಹೇಳುತ್ತಾಳೆ.

ಆ ಕುಟುಂಬಕ್ಕೆ ಸಹಾಯದ ಆಸರೆ ಅನಿವಾರ್ಯವಾಗಿತ್ತು. ಪಾತುಮ್ಮ ಸೊಸೆಗೆ, ಬುರ್ಕಾ ಕೊಡು ನಾನು ನಾರಣಣ್ಣನ ಮನೆಗೆ ಹೋಗಿ ನಮ್ಮ ಹೆಸರು ಬರೆದುಕೊಳ್ಳುವಂತೆ ಹೇಳುತ್ತೇನೆ ಎಂದು ಹೊರಡುತ್ತಾಳೆ. ಆ ಮನೆಯ ಎಲ್ಲಾ ಹೆಂಗಸರೂ ಬಳಸುತ್ತಿದ್ದ ಬುರ್ಕಾ ಒಂದೇ ಆಗಿದ್ದರಿಂದ ಅದು ಹರಿದುಹೋಗಿತ್ತು. ಅದನ್ನು ಹೊಲಿಯಬೇಕಿತ್ತು ಎಂದು ಗದರಿದಾಗ, ಸಕೀನ ಎಲ್ಲರೂ ಕಲ್ಲುಮುಳ್ಳೆನ್ನದೆ ಅದನ್ನು ಬಳಿಸಿರುವುದಿಂದ ಅದು ಹರಿದುಹೋಗಿದೆ. ನನಗೆ ಅದನ್ನು ಹೊಲಿಯಲು ಪುರುಸೊತ್ತಿಲ್ಲ ಎಂದು ಬೇಸರಪಟ್ಟುಕೊಂಡು ಅಳುವುದನ್ನು ನೋಡಿದಾಗ ಆ ಮನೆಯ ಬಡತನದ ಅರಿವುಂಟಾಗುತ್ತದೆ.

ಹಸಿದ ಹೊಟ್ಟೆ ತುಂಬಿಸಿಕೊಳ್ಳಲು ಪಾತು ಬೇರೊಂದು ಯೋಜನೆಯನ್ನು ರೂಪಿಸಿಕೊಂಡು ತನ್ನ ಆಲೋಚನೆಗೆ ತಾನೆ ರೋಮಾಂಚನಗೊಳ್ಳುತ್ತಾಳೆ. ಗುಡಿಸಲನ್ನು ಮೂರು ಭಾಗ ಮಾಡಿ ಮೂರು ಕುಟುಂಬಗಳು ಒಲೆ ಹಚ್ಚಿಬಿಟ್ಟರೆ ಮೂರು ಮನೆಗಳು ಪ್ರತ್ಯೇಕವಾಗಿ ಆ ಮೂರಕ್ಕೂ ತಲಾ ೨೦ಕೆ.ಜಿ. ಅಕ್ಕಿ ಬಂದರೆ ಹೇಗೋ ಸಂಸಾರ ನಿಭಾಯಿಸಬಹುದೆಂಬ ಆಸೆ ಉಂಟಾಗುತ್ತದೆ.

ಗುಡಿಸಲು ನಿರ್ಮಾಣ ಮಾಡಲು ಅದ್ರಾಮನ ತಾಯಿ ಸಾರಮ್ಮ ತನ್ನ ಏಕಮಾತ್ರ ಆಸ್ತಿಯಾಗಿದ್ದ ಕಾಲಿನ ಬೆಳ್ಳಿ ಗೆಜ್ಜೆಯನ್ನು ಸಂಕಪ್ಪಶೆಟ್ಟರ ಬಳಿ ಅಡವಿಟ್ಟು ಐವತ್ತು ರೂ. ಸಾಲ ಮಾಡಿ ಬೆತ್ತದ ತಟ್ಟಿಗಳನ್ನು ಹಾಗೂ ಸೋಗೆ ತಟ್ಟಿಗೆಳನ್ನು ಬಳಸಿ ಗೋಡೆಕಟ್ಟಿ ಮೂರು ಗುಡಿಸಲುಗಳನ್ನು ಕಟ್ಟಿಯೇಬಿಟ್ಟರು. ಈ ವಿಷಯವನ್ನು ಗುಟ್ಟಾಗಿ ಇಟ್ಟುಕೊಳ್ಳಲು ಎಲ್ಲರೂ ತೀರ್ಮಾನಿಸಿದರು.

ಇದಾದ ೧೮ನೆಯ ದಿನ ತಮ್ಮ ಗುಡಿಸಲಿನತ್ತ ಯಾರೋ ಐದು ಮಂದಿ



Scanned with CamScanner

ನಡೆದುಬರುತ್ತಿರುವುದನ್ನು ನೋಡಿ, ಅವರ ಬಟ್ಟೆಗಳ ಬಿಳುಪನ್ನು ನೋಡಿ, ಅವರು ನಿಜವಾಗಲೂ ಅವರು ದೇವದೂತರೆಂದೇ ತೀರ್ಮಾನಿಸಿದರು. ಆ ತಕ್ಷಣವೆ ಪಾತುಮ್ಮ ಮೂರು ಮನೆಗಳಲ್ಲೂ ಅಡುಗೆ ಮಾಡುತ್ತಿರಬೇಕೆಂದು ಸೂಚಿಸಿದಳು.

ಅಲ್ಲಿಗೆ ಬಂದ ಐದು ಜನರಲ್ಲಿ ಒಬ್ಬನು ಈಗಾಗಲೇ ಅಪ್ಪನ ಹೆಣ ತೆಗೆಯುವಾಗ ಬಂದಿದ್ದವನು, ಉಳಿದವರು ಹೊಸಬರು. ಆದರೆ ಯಾರ ಬಳಿಯಲ್ಲೂ ಮನೆಯವರ ಹೆಸರು ಬರೆದುಕೊಳ್ಳುವ ರಟ್ಟಿನ ಹೊದಿಕೆ ಹಾಕಿದ ದಪ್ಪಪುಸ್ತಕ ಕಾಣಲಿಲ್ಲ. ಪುಸ್ತಕವಿಲ್ಲದೆ ಹೆಸರನ್ನು ಬರೆದುಕೊಳ್ಳಲು ಹೇಗೆ ಸಾಧ್ಯ ಎಂಬ ಅನುಮಾನ ಪಾತುಮ್ಮಳ ಮನದಲ್ಲಿ ಸುಳಿದುಹೋಯಿತು.

ಬಂದವರು ಮನೆ ಹೊಸದಾಗಿದೆಯಲ್ಲ ಎಂದಾಗಲೂ ಪಾತುಮ್ಮಳಿಗೆ ಭಯವಾಯಿತು. ಆದರೂ ಸಾವರಿಸಿಕೊಂಡು ನಾವೆಲ್ಲರೂ ಭಾಗವಾಗಿದ್ದೇವೆ ಎಂದರೂ ಮನೆಯಲ್ಲಿ ಮೂರು ಒಲೆ ಉರಿಯುತ್ತಿವೆ ಬೇಕಾದರೆ ಪರೀಕ್ಷೆ ಮಾಡಿ ಎಂದಳು. ಅದಕ್ಕೆ ನಾವೇಕೆ ತನಿಖೆ ಮಾಡಬೇಕು ಎಂದು ಅವರು ಹೇಳಿದರು. ಆಗ ಪಾತುಮ್ಮಳಿಗೆ ಅವರು ಪಂಚಾಯತಿಯವರಲ್ಲ ಎಂದು ತಿಳಿಯಿತು.

ಬಂದವರು ಸಹಾಯ ಮಾಡುವ ಬದಲು ಅಲ್ಲಾನ ಹೆಸರಿನಲ್ಲಿ ಬಡವರಿಗೆ ಸಹಾಯ ಮಾಡಲು ನೀವು ಪ್ರತಿದಿನ ೧೦ ಪೈಸೆಯಂತೆ ಒಂದು ತಿಂಗಳಿಗೆ ಆಗುವ ಮೂರು ರೂಪಾಯಿಗಳನ್ನು ತೆಗೆದುಕೊಂಡು ಹೋಗ್ತಾರೆ. ಆ ಡಬ್ಬಿಗಳಿಗೆ ಬೀಗ ಹಾಕಿದ್ದೇವೆ. ನಿಮ್ಮ ಹಣಕ್ಕೆ ರಸೀತಿ ಕೊಡಲು ಹೇಳಿದ್ದೇವೆ. ನಿಮ್ಮಲ್ಲಿ ಮೂರು ಮನೆಗಳಿವೆ ಎಂದು ನಾರಾಣಪ್ಪನಿಗೆ ಹೇಳುತ್ತೇವೆ ಎಂದರು. ನೀವು ಮೂರು ಮನೆಗಳ ಜಮಾತನ್ನು ಕೊಡಿ ಎಂದರು.

ಆಗ ಬಡವರ ಮನೆಗಳ ಹೆಸರನ್ನು ಬರೆದುಕೊಂಡುಹೋಗಲು ಬರುವ ಕರುಣಾಳುಗಳ ನಿರೀಕ್ಷೆಯಲ್ಲಿದ್ದ ಪಾತುಮ್ಮಳಿಗೆ ವಂತಿಗೆ ವಸೂಲು ಮಾಡಲು ಬಂದವರನ್ನು ನೋಡಿ ಗುಡ್ಡದ ಮೇಲಿಂದ ಸೋಗೆಯ ಗುಡಿಸಲುಗಳ ಕಡೆಗೆ ಕಪ್ಪು ಸೈತಾನ ಎರಗಿಂದತಾಗಿ ಅದನ್ನು ಕಲ್ಪಿಸಿಕೊಳ್ಳಲಾಗದೆ. ಭಯಪಟ್ಟು ಕಣ್ಣುಮುಚ್ಚಿದಳು.

**ಕೆಳಗಿನ ಪ್ರಶ್ನೆಗೆ ಉತ್ತರಿಸಿ :-**

೧) ನಾವು ಅನುಸರಿಸುತ್ತಿರುವ ಧರ್ಮಕ್ಕಿಂತಲೂ ಮನುಷ್ಯನೆ ಮುಖ್ಯ ಎಂಬುದು "ಕಪ್ಪು ಕಲ್ಲಿನ ಸೈತಾನ" ಎಂಬ ಕಥೆಯಲ್ಲಿ ಹೇಗೆ ಕಾಣಿಸಿಕೊಂಡಿದೆ.



CS Scanned with CamScanner

ಸೂಚನೆ : ಇದಕ್ಕೆ ಕಥೆಯ ಸಾರಾಂಶವನ್ನು ಬರೆಯಿರಿ.

ಸಂದರ್ಭ ಸ್ವಾರಸ್ಯ ಬರೆಯಿರಿ :–

೧) ಬಡವರ ಮನೆಯ ಹೆಸರುಗಳನ್ನು ಯಾವುದರಲ್ಲಿ ಬರೆದುಕೊಳ್ಳುತ್ತಾರೆ ?

ಈ ಸಾಲನ್ನು "ಕಪ್ಪು ಕಲ್ಲಿನ ಸೈತಾನ" ಎಂಬ ಕಥೆಯಿಂದ ಆರಿಸಿಕೊಳ್ಳಲಾಗಿದೆ. ಈ ಥೆಯನ್ನು ಬರೆದವರು ಬೋಳುವಾರು ಮಹಮದ್ ಕುಞ. ಅಲ್ಲಿಗೆ ಬಂದ ಐದು ಜನರಲ್ಲಿ ಒಬ್ಬನು ಈಗಾಗಲೇ ಅಪ್ಪನ ಹೆಣ ತೆಗೆಯುವಾಗ ಬಂದಿದ್ದನು. ಉಳಿದವರು ಹೊಸಬರು. ಆದರೆ ಯಾರ ಬಳಿಯಲ್ಲೂ ಮನೆಯವರ ಹೆಸರು ಬರೆದುಕೊಳ್ಳುವ ರಟ್ಟಿನ ಹೊದಿಕೆ ಹಾಕಿದ ದಪ್ಪಪುಸ್ತಕ ಕಾಣಲಿಲ್ಲ. ಪುಸ್ತಕವಿಲ್ಲದೆ ಹೆಸರನ್ನು ಬರೆದುಕೊಳ್ಳಲು ಹೇಗೆ ಸಾಧ್ಯ ಎಂಬ ಅನುಮಾನ ಪಾತುಮ್ಮಳ ಮನದಲ್ಲಿ ಸುಳಿದುಹೋಯಿತು.



Scanned with CamScanner

ಒಂದು ಅಂಕದ ಪ್ರಶ್ನೆಗಳು :-

೧) ಅಬ್ಬಕ್ಕನ ಮಗನ ಹೆಸರೇನು ?

೨) ಖತೀಜಾಬಿ ಯಾರು ?

೩) ಇಬ್ರಾಹಿಂ ಹಾಜಿ ಯಾರನ್ನು ಮದುವೆಯಾಗಲು ಬಯಸಿದ್ದರು ?

೪) ಕಾದರ್ ಯಾರು ?

೫) ಖತೀಜಾಬಿಯ ಮಗನ ಹೆಸರೇನು ?

೬) ಜಮಾಹತ್ ಸಮಿತಿಯ ಅಧ್ಯಕ್ಷರ ಹೆಸರೇನು ?

೭) ರವಿಕಾಂತ ಹೆಸರು ಬಂದಿರುವ ಕಥೆಯ ಹೆಸರೇನು ?

೮) ಸಾರಮ್ಮನ ಮಗನ ಹೆಸರೇನು ?

೯) ಕುಂಞ ಪಾತುಮ್ಮಳ ಹಿರಿಯ ಮಗಳ ಹೆಸರೇನು ?

೧೦) ಬೆಳ್ಳಿಯ ಗೆಜ್ಜೆಯನ್ನು ಎಷ್ಟು ರೂಪಾಯಿಗೆ ಮಾರಲಾಯಿತು ?

೧೧) ಮದುವೆಗೆ ಕುದುರೆ ಮೆರವಣಿಗೆಯನ್ನು ನಿಯೋಜಿಸಿದವರು ಯಾರು ?

೧೨) ಶ್ರೀದೇವಿಗೆ ಇಷ್ಟವಾದ ನಟನ ಹೆಸರೇನು ?



CS Scanned with CamScanner

೧೩) ಶ್ರೀದೇವಿ ನೀರನ್ನು ಒಯ್ಯದಂತೆ ತಡೆದವರು ಯಾರು ?
೧೪) ಯೋವನ್ ಯಾರು ?
೧೫) ಶಾಂತಗೌಡನ ಅಕ್ಕನ ಹೆಸರೇನು ?

ಒಂದು ಅಂಕದ ಪ್ರಶ್ನೆಗಳು ಕಾವ್ಯಭಾಗ

೧) ಮುದಿಯ ರಾಮಗೌಡ ಯಾರನ್ನು ಮದುವೆಯಾದನು ?
೨) ಕುರುಡು ಕಾಂಚಾಣ ಯಾರನ್ನು ತುಳಿಯುತಲಿತ್ತು ?
೩) ಹೊಸಬಾಳಿನ ಗೀತೆ ಕವಿತೆಯನ್ನು ಬರೆದ ಕವಿಯ ಹೆಸರೇನು ?
೪) ನಾಯಿ ಮರಿಯು ಯಾರ ಕಂಬಳಿಯೊಳಗೆ ಸೇರಿಕೊಂಡಿತು ?
೫) ಕುರುಬನು ನಾಯಿಗೆ ತಿನ್ನಲು ಏನನ್ನು ಕೊಟ್ಟನು ?
೬) ಕೃಷ್ಣಮಾಯೆ ಯಾವ ದೇಶದವರನ್ನು ಆಕರ್ಷಿಸಿದೆ ?
೭) ಬತ್ತಲಾರದ ಗಂಗೆಯಲ್ಲಿ ದುರ್ಯೋಧನ ಯಾವ ವೇಷ ಧರಿಸಿದ್ದಾನೆ ?
೮) ಗಂಗೆಯನ್ನು ಭೂಮಿಗೆ ತಂದವರಾರು ?
೯) ಸರಿತೆ ಯಾರು ?
೧೦) ಪುರುಷಸೂಕ್ತದ ಪ್ರಕಾರ ಆಧುನಿಕ ಭಾರತದ ಸಾಧಕ ಯಾರು ?
೧೧) ಲಕ್ಷ್ಮಣನ ವ್ರತಕ್ಕೆ ರಕ್ಷಣೆಯಾಗಿ ನಿಂತವಳ ಹೆಸರೇನು ?
೧೨) ಬೆಕ್ಕು ಯಾರನ್ನು ತಿಂದಿತು ?
೧೩) ಸಿಂಹಾವಲೋಕನದಲ್ಲಿ ಶಕ್ತಿವಂತರು ಯಾರು ?
೧೪) 'ಕಾಗಿ ಕೈಯಾಗ ಕಛೇರಿ' ಇದು ಯಾವ ಕವಿತೆಯ ಸಾಲಾಗಿದೆ ?
೧೫) ಅಗಸನ ಮಾತನ್ನು ನಂಬಿದವರು ಯಾರು ?
೧೬) ಅಹಲ್ಯೆಗೆ ಏನೆಂದು ಶಾಪ ನೀಡಲಾಗಿತ್ತು ?
೧೭) ಶಿವನ ವೇಷದಾರಿ ಏನನ್ನು ಪುಕ್ಕಟೆಯಾಗಿ ಪಡೆದನು ?
೧೮) ಮತ್ಸ್ಯವು ಏನನ್ನು ನುಂಗಿತು ?



CS Scanned with CamScanner

'ಪದ್ಯ ಹಂಚಿಸಿದವರು'

ಪ್ರಥಮ ಬಿ.ಕಾಂ ೨ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ   ದಿ:- 10-03-2020

ಡಾ. ಮಂಜುಳ. ಬಿ.ಎಚ್.
ಮುನಿಯಪ್ಪ.ನ
ಉಪನ್ಯಾಸಕರು.

ಬತ್ತಲಾರದ ಗಂಗೆ

ಎಂ. ಗೋಪಾಲಕೃಷ್ಣ ಅಡಿಗರು.

I ಒಂದು ವಾಕ್ಯದಲ್ಲಿ ಉತ್ತರಿಸಿ.

1> ನವ್ಯ ಕಾವ್ಯದ ಪ್ರವರ್ತಕರು — ಎಂ. ಗೋಪಾಲ ಕೃಷ್ಣ ಅಡಿಗರು

2> ಬತ್ತಲಾರದ ಗಂಗೆ ಕವಿತೆಯ ಕರ್ತೃ - ಎಂ. ಗೋಪಾಲ ಕೃಷ್ಣ ಅಡಿಗರು

3> ಗಂಗೆಗೆ ಈಗ ಬಂದಿರುವ ದು:ಸ್ಥಿತಿ ಎಂತಹದ್ದು - ಹಳ್ಳಕೊಳ್ಳದ ದುರ್ನಾತ ಕೆಸರು ರಾಡಿ

4> ಅಹಮ ಜೋಡಿಗಳಾಗಿರುವುದು ಯಾವುವು — ಅಮೃತ ಜಲ - ಮೃತ್ತಿಕೆ

5> ಗಂಗಳ್ಳಿ ಗಂಗಾಳದ ತುಂಬ ಏನನ್ನು ಇಟ್ಟು ಕುಳಿತ್ತಿದ್ದಾಳೆ - ಗಂಜಿಯನ್ನಿಟ್ಟು

6> ದೇಶದುದ್ದಕ್ಕೂ ಹಾಸುತ್ತಿರುವುದು ಏನು? — ಕುರುಕ್ಷೇತ್ರ

7> ದುರ್ಯೋಧನ, ಶಕುನಿ ತೊಟ್ಟಿರುವ ವೇಷಗಳಾವುವು — ಯುಧಿಷ್ಠಿರ ಮತ್ತು ಶ್ರೀಕೃಷ್ಣ.

8> ಆಕಾಶದಿಂದ ಅನಾಮತ್ತಾಗಿ ಬಿದ್ದವರು ಯಾರು — ಸನ್ಯಾಸಿಗಳು

9> ಕೊಳ್ಳಿದೆವ್ವಗಳಂತೆ ಮಿಂಚಿ ಮರೆಯಾದವರು ಯಾರು — ರಾಮಕೃಷ್ಣರು, ಬುದ್ಧ ಮಹಾವೀರರು

10> ಗಂಗೆಯನ್ನು ಭೂಮಿಗೆ ತಂದವರು - ಭಗೀರಥ

11> ಗಂಗೆಯ ದಡದ ಮೇಲೆ ನಿಂತಿದ್ದವರು ಯಾರು - ವಿದ್ಯಾರಣ್ಯರು

12> ನುಚ್ಚು ನೂರಾಗಿರುವುದು ಯಾವುದು — ಕುರುಕ್ಷೇತ್ರ ಜಪಮಾಲೆ

13> ಅದ ಇನ್ನೂ ಬದುಕಿರುವುದು ಯಾವುದಕ್ಕೆ - ಕತ್ತು ಕತ್ತರಿಸಿಕೊಳ್ಳ. ಎರಡು ನದಿಗಳು ಒಂದಾಗಿ ಮುಂದಕ್ಕೆ ಸಾಗಲಿ

14> ಎಂ. ಗೋಪಾಲಕೃಷ್ಣ ಅಡಿಗರ ಎರಡು ಕವನ ಸಂಕಲನ — ಸುವರ್ಣ ಪುತ್ಥಳಿ, ಭೂಮಿಗೀತ.

15>

## ಭಾವಾರ್ಥ

1) ಆಕಾಶಗಂಗೆಯಿಂದ ನಾವು ತೀರ್ಥವನ್ನು ಬಿಡುವವರು,
ಈ ಕಾಲಕ್ಕೆ ಇಳಿದರೂ ಕಾಪಿಗಳು
ಕೋಟಿ ದೇವ್ರಗಳಂತೆ ಮಿಂಚಿ ಮರೆಯಾದವರು.
ರಾಮ ಕೃಷ್ಣರು, ಬುದ್ಧ ಮಹಾವೀರರು.

2) ಹಿಮಾಲಯದಿಂದ ಕರಗಿ ಕೆಳಗಿಳಿವ ವರ್ಷದ ತೊರೆಗಳು,
ಅಮೃತಜಲ ಮುತ್ತಿಕೆಗಳ ಹನಿ ಜೋಡಿ.
ಹಿಂತು ಕೊಳೆಯುವ ಮನುಗಳನ್ನು ಮತ್ತಿಂದು ಇದೆ
ಹಳೆ ಕೊಳೆಯು ಸುವಾರ್ತೆ ಕೆಸರು ರಾಡಿ.

## ಸಂದರ್ಭ

1) "ಬತ್ತಲಾರದ ಗಂಗೆಗಂಧ ಕುತ್ತಿದು, ನೋಡು."
2) "ಹಳೆ ಕೊಳೆಯು ಸುವಾರ್ತೆ ಕೆಸರು ರಾಡಿ."
3) "ಗಂಗಾಳ ತುಂಬ ಗಂಗೆಂದುಕೊಂಡು ಕುಳಿತ ತಿದ್ದಾಳೆ"
4) "ಕರುಣಿಯಿಂದ ಶ್ರೀ ಕೃಷ್ಣ ನೀಡ ಉತ್ತರವಿಗೆ"
5) "ಕೋಟಿ ದೇವ್ರಗಳಂತೆ ಮಿಂಚಿ ಮರೆಯಾದವರು".
6) "ಅಮೂರ್ತರಾಗಿಯು ಮೂರ್ತರಾಗುತಿದರು."
7) "ಕುರು ಕ್ಷೇತ್ರ ಜನವಗಲಿ ಮುಚ್ಚು ನಗರು"
8) ಹೃದಯ ದಂತರ್ಗಂಗೆ ತುಂಬಿ ಚೆಲ್ಲಿ.

## ಟಿಪ್ಪಣಿಗಳು

1. ಗೋಪಾಲಕೃಷ್ಣ ಅಡಿಗರು. 2. ಕೋಟಿ ದೇವತೆಗಳು, 3. ರಾಮ ಕೃಷ್ಣ ಬುದ್ಧರು.
4 ಹರಿದ್ವಾರದಲ್ಲಿ ಧರ್ಮಕ್ಷೇತ್ರ. 5. ಭಗೀರಥ

ವಿವರವಾದ ಪ್ರಶ್ನೆಗಳು ;- 1) ಹೊಸ ನೀರು ಬಂದರೂ ಅಧರ್ಮ ಅನ್ಯಾಯಗಳೇ ಧರ್ಮವಾಗಿರುವುದನ್ನು 'ಬತ್ತಲಾರದ ಗಂಗೆ' ಕವಿತೆಯಲ್ಲಿ ಹೇಗೆ ವ್ಯಕ್ತಪಡಿಸಲಾಗಿದೆ.?
2) ಬತ್ತಲಾರದ ಗಂಗೆ ಕವಿತೆಯ ಆಶಯವನ್ನು ಚರ್ಚಿಸಿ.

Scanned by CamScanner

ದಿ: 14-04-2020
ಮಂಗಳವಾರ

ಸಂಗ್ರಹ

ಪ್ರಥಮ ಪಿ.ಯು.ಸಿ [illegible] ವಿದ್ಯಾರ್ಥಿಗಳಿಗೆ

ಡಾ. ಬಿ.ಎಸ್. ಮಂಜುಳ

ಮುಂಜಿ ಅಯ್ಯಪ್ಪ

## 'ನನ್ನ ಅವತಾರ'

ಶಶಿಕಲಾ ವೀರಯ್ಯಸ್ವಾಮಿ

I ಒಂದು ವಾಕ್ಯದಲ್ಲಿ ಉತ್ತರಿಸಿ:-

1. 'ನನ್ನ ಅವತಾರ' ಕವಿತೆಯ ಕರ್ತೃ ಯಾರು — ಶಶಿಕಲಾ ವೀರಯ್ಯಸ್ವಾಮಿ.
2. 'ಕಾಗಿ ಕ್ರೌಯೆಗ ಕವನ' ಇದು ಯಾವ ಕವಿತೆಯ ಸಾಲು – 'ನನ್ನ ಅವತಾರ'
3. ಬಾರೋ ಈಗ ಅಂಜುಬುರುಕಾ ಯಾಕೆ ಕಣ್ಣೀರಿಡ ಇದು ಯಾರಿಗೆ ಯಾರು ಕೇಳುವ ಪ್ರಶ್ನೆ – ಪುರುಷ ದೇವರಿಗೆ, ಶಶಿಕಲಾ ವೀರಯ್ಯಸ್ವಾಮಿ.
4. ಕ್ಷೀರಾಬ್ಧಿಶಾ ಕೇಳ್ತೀಯಲ್ಲೊ ನಾಚಿಗ್ಗೇಡಿ! ಈ ವಾಕ್ಯ ಎಲ್ಲಿ ಪ್ರಯೋಗಿಸಲಾಗಿದೆ – 'ನನ್ನ ಅವತಾರ' ಕವಿತೆಯಲ್ಲಿ
5. ಕೊಡೋ ಮಗನ ನಿನ್ನ ಪೀತಾಂಬರದ ಚೂರು, ಈ ಹೇಳಿಕೆ ಯಾರದು? ಶಶಿಕಲಾ ವೀರಯ್ಯಸ್ವಾಮಿ.
6. ಒಂದೇ ಒಂದಿನಾ ಚಾರ್ಜ, ಕೊಟ್ಟು ನೋಡೋ ನನಗ ಈ ವಾಕ್ಯ ಒಂದಿನಾ ಚಾರ್ಜ ಏನನ್ನು ಧ್ವನಿಸುತ್ತದೆ – ಅಧಿಕಾರ
7. ಈ ಚಂಡಾಲರನ್ನ ಚೆಂಡಾಡಿ, ರುಂಡ ಮಾಲ ಹಾಕ್ಕೊಂಡು ಕುಣೀತಿನಿ – ಇಲ್ಲಿನ ಚಂಡಾಲರ ಪದ ಯಾರನ್ನು ಉದ್ದೇಶಿಸಿ – ಕೆಟ್ಟ ಜನರನ್ನು
8. ನಿನ್ನ ಒಂದು ಕೈ. ನೋಡೇ ಬಿಡ್ತಿನಿ – ಕವಯಿತ್ರಿ ಯಾರನ್ನು ಉದ್ದೇಶಿಸಿ ಮಾತನಾಡಿದ್ದಾರೆ – ಪುರುಷ ದೇವರನ್ನು.
9. ಶಶಿಕಲಾ ವೀರಯ್ಯಸ್ವಾಮಿ ಬರೆದಿರುವ ಕವನ ಸಂಕಲನ ಒಂದನ್ನು ಹೆಸರಿಸಿ.
– ಸುಬ್ಬಮನಿ, ಜೀವ ಪಾವಕಗಳ ನಡುವೆ.

Scanned with CamScanner

## ಭಾವಾರ್ಥ

1. ಅಲ್ಲೋ ಹನಿ ಹಾಲಲ್ಲಿ ಬತ್ತಿ
   ಮಕ್ಕಳ ಹೊಸ ವಸ್ತ್ರದಂತೆ
   ಕ್ಷೀರಾಬ್ಧಿಯ ಕೆಸ್ತುಂಬಲ್ಲೆ
   ನಾಚಿಕೆಲ್ಲದ!

2. ನಕ್ಷತ್ರಗಳಗೆಲ್ಲ ಹಾಲ ಹುಂಡಿ
   ನೆಲಕೆಲ್ಲ ಪೀತಾಂಬರ ಹಾಸ್ತೀನಿ,
   ಈ ಚಂದಾಲಕ್ಕೆಲ್ಲ ಚೆಂದಾದ
   ದುಂಡ ಮಾಲೆ ಹಾಕ್ಕೊಂಡು
   ಕುಣೀತೀನಿ.

## ಸಂದರ್ಭ

1. ಏನ್ತೇ ಬಡವ್ರನ್ನ. ಬತ್ತೊ ತುಳಿದವ್ರನ್ನ ಗಂಡಸಾಗಿದ್ರು!!
2. ನಿನಗ್ಯಾಕೇ ಬೇಡಿ, ಹುಡುಗ್ಯಾರ ಹಿಂದೆ ಕಲ್ಲು ಹೊಡಿ.
3. ಬಾರೋ ಈಗ ಅಂಬುಬುರಕ್ಕಾಂತಾರ ಕಲ್ಲಾಗಿದಿ?

## ವಿವರವಾದ ಪ್ರಶ್ನೆಗಳು

1) ನಿಜ್ಜದ ಕಲ್ಲಾಗಿರುವ ದೈವಕ್ಕೆ ಮುಖಾಮುಖಿ ಪ್ರಶ್ನೆಗಳನ್ನು ಹಾಕಿ ತಾನೆ ಉತ್ತರಿಸುತ್ತಿರುವ ನಾಟಕೀಯ ಸಂದರ್ಭ 'ನನ್ನ ಅವತಾರ' ಕವಿತೆಯಲ್ಲಿ ನಿರೂಪಿತಗೊಂಡಿರುವ ಬಗೆಯನ್ನು ವಿವರಿಸಿ.

2) ಬಡತನ, ಹಸಿವು, ಮಂಡೂರದ ಮುಚ್ಚಲು, (ನಿಕೆಂತು) ಕಷ್ಟಕಾರ್ಪಣ್ಯವನ್ನು ನೀಡುವ ಬದಲು ಸ್ವಚ್ಛಂದತೆಯಲ್ಲಿ ಮೆರೆದಾಡುವ ದೈವವನ್ನು ಕವಿತೆಯಲ್ಲಿ ಚಿತ್ರಿಸಿರುವ ಬಗೆಯನ್ನು ಚರ್ಚಿಸಿ. (ನನ್ನ ಅವತಾರ)

3) ನನ್ನ ಅವತಾರ ಕವಿತೆ ಪುರುಷ ಪ್ರಧಾನ ಸಮಾಜಕ್ಕೆ ಒಡ್ಡಿದ ಸವಾಲುಗಳೇನು?

ಟಿಪ್ಪಣಿ:- 1) ಕೆಕೆಕಲು ಆರಂಭ್ಯ ಸ್ವಾಮಿ. 2 ನನ್ನ ಅವತಾರ.
3 ಪೀತಾಂಬರ, 4 ಪುರುಷ ದೇವರು. 5.

Scanned with CamScanner

[illegible]

ಪ್ರಥಮ ಬಿ.ಕಾಂ ೩ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ದಿ:- 10-09-2020

ಡಾ. ಮಂಜುಳ ಬಿ.ವಿ.

[illegible] ಬತ್ತಲಾರದ ಗಂಗೆ

ಉಪನ್ಯಾಸಕರು. ಎಂ. ಗೋಪಾಲಕೃಷ್ಣ ಅಡಿಗರು.

I ಒಂದು ವಾಕ್ಯದಲ್ಲಿ ಉತ್ತರಿಸಿ.

1) ನವ್ಯ ಕಾವ್ಯದ ಪ್ರವರ್ತಕರು – ಎಂ. ಗೋಪಾಲಕೃಷ್ಣ ಅಡಿಗರು

2) ಬತ್ತಲಾರದ ಗಂಗೆ ಕವಿತೆಯ ಕರ್ತೃ - ಎಂ. ಗೋಪಾಲಕೃಷ್ಣ ಅಡಿಗರು

3) ಗಂಗೆಗೆ ಈಗ ಬಂದಿರುವ ದುಃಸ್ಥಿತಿ ಎಂತಹದ್ದು – ಹಳ್ಳಕೊಳ್ಳದ ದುರ್ನಾತ ಕೆಸರು ರಾಡಿ

4) ಅಮರ ಜ್ಯೋತಿಗಳಾಗಿರುವುದು ಯಾವುವು – ಅಮೃತ ಜಲ - ಮೃತ್ತಿಕೆ.

5) ಗಂಗೆಯ ಗಂಗಾಳದ ತುಂಬ ಏನನ್ನು ಇಟ್ಟುಕೊಳ್ಳುತ್ತಿದ್ದಾಳೆ - ಗಂಜಿಯನ್ನಿಟ್ಟು

6) ದೇಶದುದ್ದಕ್ಕೂ ಹಾಕುತ್ತಿರುವುದು ಏನು? – ಕುರುಕ್ಷೇತ್ರ

7) ದುರ್ಯೋಧನ, ಶಕುನಿ ತೊಟ್ಟಿರುವ ವೇಷಗಳು ಯಾವುವು – ಯುಧಿಷ್ಠಿರ ಮತ್ತು ಶ್ರೀಕೃಷ್ಣ.

8) ಆಕಾಶದಿಂದ ಅನಾಮತ್ತಾಗಿ ಬಿದ್ದವರು ಯಾರು – ಸನ್ಯಾಸಿಗಳು

9) ಕೊಳ್ಳಿದೆವ್ವಗಳಂತೆ ಮಿಂಚಿ ಮರೆಯಾದವರು ಯಾರು – ರಾಮಕೃಷ್ಣರು, ಬುದ್ಧ ಮಹಾವೀರರು

10) ಗಂಗೆಯನ್ನು ಭೂಮಿಗೆ ತಂದವರು - ಭಗೀರಥ

11) ಗಂಗೆಯ ದಡದ ಮೇಲೆ ನಿಂತಿದ್ದವರು ಯಾರು - ವಿದ್ಯಾರಣ್ಯರು

12) ಮುಚ್ಚಿ ಹೋಗಿರುವುದು ಯಾವುದು – ಕುರುಕ್ಷೇತ್ರ ಜಪಮಾಲೆ

13) ಅವ ಇನ್ನೂ ಉಳಿದಿರುವುದು ಯಾವುದಕ್ಕೆ - ಕತ್ತು ಕತ್ತರಿಸಿಕೊಳ್ಳ ಎರಡು ಪಡೆಗಳು ಒಂದಾಗಿ ಮುಂದಕ್ಕೆ ಸಾಗಲು

14) ಎಂ. ಗೋಪಾಲಕೃಷ್ಣ ಅಡಿಗರ ಎರಡು ಕವನ ಸಂಕಲನ – ಸುವರ್ಣ ಪುತ್ಥಳಿ. ಭೂಮಿಗೀತ.

Scanned with CamScanner

## ಭಾವಾರ್ಥ

1) ಆಕಾಶಗಂಗೆಯಿಂದ ನಾಮುತ್ತಾಗಿಲ್ಲ ಬಿದ್ದವರು,
ಈ ಕಾಲಕ್ಕೆ ಇಳಿದರೂ ಕಾಪಿಗಳು
ಕೊಳ್ಳಿ ದೆವ್ವಗಳಂತೆ ಮಿಂಚಿ ಮರೆಯಾದವರು.
ರಾಮ ಕೃಷ್ಣರು, ಬುದ್ಧ ಮಹಾವೀರರು.

2) ಹಿಮಾಲಯದ ಕರಗಿ ಕೆಳಗಿಳಿದ ವರ್ಷದ ತೊರೆಗಳು,
ಅಮೃತಜಲ ಪತ್ರಿಕೆಗಳ ದಿನ ಹೋಲಿಕೆ.
ನಿಂತು ಕೊಳೆಯುವ ಮಡುಗಳಲ್ಲಿ ಮಡಗಿಂದು ಇದೆ
ಹಳ್ಳಕೊಳ್ಳಂದು ದುರ್ನಾತ ಕೆಸರು ರಾಡಿ.

## ಸಂದರ್ಭ

1) "ಚಿತ್ರಪುರದ ಗಂಗೆಗೆಂಥ ಕುತ್ತಿದು, ನೋಡು."
2) "ಹಳ್ಳಕೊಳ್ಳಂದು ದುರ್ನಾತ ಕೆಸರು ರಾಡಿ"
3) "ಗಂಗಾಳ ತುಂಬ ಗಂಜಿಯುಣ್ಣುತ್ತ ಕುಳಿತ ತಿಪ್ಪಾಳ"
4) "ಕುರುಡಿಂಗೆ ಶ್ರೀಕೃಷ್ಣ ವೇಷ ಚಿತ್ರರಥಿಗೆ"
5) "ಕೊಳ್ಳಿ ದೆವ್ವಗಳಂತೆ ಮಿಂಚಿ ಮರೆಯಾದವರು".
6) "ಅಯೋಗ್ಯರಾಗಿಯೂ ಯೋಗ್ಯರಾಗುಳಿದರು."
7) "ಕುರುಕ್ಷೇತ್ರ ಜಪಮಾಲೆ ಮುಚ್ಚುನಗರು"
8) ಹೃದಯ ದಂತಗಂಗೆ ತುಂಬ ಚೆಲ್ಲಿ.

## ಉತ್ತರಗಳು

1. ಗೋಪಾಲ ಕೃಷ್ಣ ಅಡಿಗರು. 2. ಕೊಳ್ಳಿ ದೆವ್ವಗಳು. 3. ರಾಮ ಕೃಷ್ಣ ಬುದ್ಧರು.
4. ಎಲ್ಲಾರಗ್ಗ ಧರ್ಮಕ್ಷೇತ್ರ. 5. ಭಗೀರಥ

ವಿವರಣಾತ್ಮಕ ಪ್ರಶ್ನೆಗಳು :- 1) ಹೊಸ ಹಿರು ಎಂದರು ಅಧರ್ಮ ಅನ್ಯಾಯಗಳೇ ಧರ್ಮವಾಗಿರುವುದನ್ನು 'ಚಿತ್ರಪುರದ ಗಂಗೆ' ಕವಿತೆಯಲ್ಲಿ ಹೇಗೆ ಸ್ಪಷ್ಟಿಸಲಾಗಿದೆ.?
2) ಚಿತ್ರಪುರದ ಗಂಗೆ ಕವಿತೆಯ ಆಶಯವನ್ನು ತಿಳಿಸಿ.

Scanned with CamScanner